ಮುಕುಂದ ಹಿತ್ತಲಿಗೆ ಹೋಗಿ, 'ಇಬ್ರು ತಾತಾರು ಬಂದವ್ರೆ ಅಜ್ಜಿ. ಬನ್ನಿ ಕೂಗ್ತಾ ಅವ್ರೆ ನಿಮ್ನ' ಎಂದು ಕರೆದ. ಕಜ್ಜಿ ನಿಂಗಣ್ಣ ಬರೋದ್ರೊಳಗೆ ತಾನು ಸಾಕಿದ್ದ ಕೋಳಿಗಳಿಗೆ ಮೇವು ಹಾಕಲು ಆಕೆ ಹಿತ್ತಲಿಗೆ ಹೋಗಿದ್ದಳು. ಕೋಳಿಗಳಿಗೆ ಅಕ್ಕಿ ನುಚ್ಚನ್ನು ಹಾಕುತ್ತಾ, ಈಚೆಗೆ ಹನ್ನೆರಡು ಮರಿಗಳನ್ನು ಮಾಡಿದ್ದ ತಾಯಿಕೋಳಿಯು ತನ್ನ ಹೂಮರಿಗಳನ್ನು ಆಡಿಸುತ್ತಾ ಅವುಗಳಿಗೆ ಅಕ್ಕಿನುಚ್ಚು ತಿನ್ನಿಸಲು ಅತ್ತಿತ್ತ ನಲಿದಾಡುತ್ತಾ ಅನುವು ಮಾಡಿಕೊಡುತ್ತಿದ್ದುದ್ದನ್ನು ನೋಡುತ್ತಾ ಮೈಮರೆತು ಕೂತಿದ್ದಳು. ಮತ್ತೊಂದು ಕೋಳಿ ತನ್ನ ಮೊಟ್ಟೆಗಳ ಮೇಲೆ ಕೂತು ಮರಿ ಮಾಡಲು ಕಾವು ಕೊಡುತ್ತಿತ್ತು. ಚಿನ್ನವ್ವ ತನ್ನ ಮನೆಯಲ್ಲಿ ಲೆಕ್ಕ ತಪ್ಪಿಸುವಷ್ಟು ಕೋಳಿಗಳನ್ನು ಸಾಕಿದ್ದಳು. ಅವುಗಳನ್ನು ಸಾಕಿ, ದೊಡ್ಡವು ಮಾಡಿ, ಪೇಟೆಯಿಂದ ಬರುವ ಆಕಳಿಗೂಡು, ಕೋಳಿಮೊಟ್ಟೆ ಸಾಬರಿಗೆ ಮಾರುತ್ತಿದ್ದಳು. ಮನೆಗೆ ನೆಂಟರು ಬಂಧು ಬಳಗದವರು ಬಂದಾಗಲೂ ಕೋಳಿ ಕುಯ್ದು ಅಡುಗೆ ಮಾಡಿ ಬಡಿಸುತ್ತಿದ್ದಳು. ಅಲ್ಲಿಯ ದೃಶ್ಯವನ್ನು ಕಣ್ತುಂಬಿಕೊಂಡು ಕೂತಿದ್ದ ಅಜ್ಜಿಯನ್ನು ಮೊಮ್ಮಗ ಬಂದು ಕೂಗಿದಾಗ, 'ನಿಮ್ಮ ಚಿಕ್ಕ ತಾತಾ ಬಂತಾ? ಬಂದೇ' ಎನ್ನುತ್ತಾ ಎದ್ದು ಒಳಗೆ ಬರುವಾಗ ಹುಂಜವೊಂದು ಹೇಂಟೆಯನ್ನು ಓಡಾಡಿಸಿಕೊಂಡು ಬಂದು ಅದು ಅವಳ ಕಾಲಿಗೆ ಸಿಕ್ಕಿತು. ಆಗ, 'ಮೊದಲು ಈ ಹುಂಜವ ಕುಯ್ದು ಇದರ ಸೊಕ್ಕನ್ನು ಅಡಗಿಸಬೇಕು. ಹ್ಯಾಟೆಗಳನ್ನೆಲ್ಲಾ ಸುಮ್ಮನೆ ಗೋಳು ಹುಯ್ದುಕೊಳ್ಳುತ್ತದೆ' ಎಂದು ಗೊಣಗುತ್ತಾ ಒಳಗೆ ಬಂದಳು.

ನಡುಮನೆಗೆ ಬಂದ ಚಿನ್ನವ್ವ ಮೈದುನರಿಗೆ 'ಬಂದೇ' ಎನ್ನುತ್ತಾ ಒಲೆ ಮೇಲೆ ಕಾಫಿಗೆ ಇಡಲು ಕೋಣೆಗೆ ಹೋದಳು. ಕಾಫಿ ಮಾಡಿ ತಂದು ತನ್ನ ಮೈದುನರಿಗೆ ಕೊಡುತ್ತಾ ಆಕೆ, 'ಅದೇನು ನೀವು ಇವರ ರಗಳೆ ರಂಪಾಟಕ್ಕೆ ಒಂದು ಗತಿ ಕಾಣಿಸಿಬಿಡಿ! ನಾವು ಒಟ್ಟಿಗೆ ಇರಲ್ಲ ಅಂತಾರೆ. ಮನಸ್ಸುಗಳು ಒಡೆದು ಹೋದ ಮೇಲೆ ಕೂಡಿಸೋದ್ರಲ್ಲಿ ಅರ್ಥವಿಲ್ಲ. ನನಗೂ ನಿತ್ಯ ಇವರ ವೈಷಮ್ಯ ನೋಡಿ ನೋಡಿ ಬೇಸತ್ತು ಹೋಗಿದೆ. ಅದರಲ್ಲೂ ಈ ರಾಜನ ಹೊಡೆತದ ತಾಳವ ಯಾರಿಗೂ ತಡೆದುಕೊಳ್ಳಲು ಆಗ್ತಾ ಇಲ್ಲ!' ಎಂದಳು.

ಮೈದುನರು ಬೆಲ್ಲದ ಕಾಫಿ ಕುಡಿಯುತ್ತಾ ಮಾತಿಗಿಳಿದರು. ಚಿನ್ನವ್ವ ತನ್ನ ಮಾತನ್ನು ಮುಂದುವರಿಸಿ, 'ಇವರಪ್ಪ ಸತ್ತು ವರ್ಷವಾಯ್ತು! ತಿಂಗಳ ತಿಥಿ ದಿನ ಇವರು ಮಾಡಿದ ರಂಪಾಟ ಇನ್ನೂ ನನ್ನ ಕಣ್ಣಿಂದ ಮಾಸಿಲ್ಲ. ಈಗ ವರ್ಷಕ್ಕೆ ಸರಿಯಾಗಿ ಮತ್ತೆ ಖ್ಯಾತೆ ತೆಗೆದವ್ರೆ. ನಾವು ಒಟ್ಟಿಗೆ ಇರಲ್ಲ ಅಂತಾರೆ. ಅದೇನಿದೆ ಅದನ್ನೆಲ್ಲಾ ಇವರಿಗೆ ಮೂರು ಭಾಗ ಮಾಡಿಕೊಟ್ಟು ಬಿಡಿ. ಇನ್ನು ಮುಂದಾದರೂ ಅವರು ಸರಿಯಾದರೇನೋ ನೋಡುವ. ಅವರಿಗೆ ಅವರವರ ಭಾಗ ಮಾಡಿಕೊಟ್ಟು, ಬುದ್ಧಿಮಾತು ಹೇಳಿ ಅಂತಾಲೇ ನಾನು ನಿಮ್ಮನ್ನ ಕರೆಸಿದ್ದು' ಎಂದಳು.

ಆಗ ಎಮ್ಮೆಕಾಳಯ್ಯ ಬಾಯಾಕಿ, 'ಈ ವಿಷಯ ಈ ಮನೆಯಿಂದ ಆಚೆಗೆ ಹೋಗುವುದು ಬ್ಯಾಡ. ಸತ್ತು ಸ್ವರ್ಗದಲ್ಲಿರುವ ನಮ್ಮಣ್ಣನಿಗೂ ನನ್ನ ಮಕ್ಕಳು ಭಾಗ ಆದರಂತೆ ಅಂತ ಗೊತ್ತಾಗೋದು ಬ್ಯಾಡ! ನಮ್ಮಣ್ಣನ ತಿಂಗಳ ತಿಥಿ ದಿನ ಆ ಚಂದ್ರಪ್ಪನ ಹೆಂಡ್ತಿಯ ತೆರದಣದ ಹೋತವನ್ನು ಕುಯ್ದ ದಿನದಿಂದಲೇ ಇವರ ನಡುವೆ ಈ ವೈಷಮ್ಯ ಶುರುವಾಯ್ತು. ಆಮೇಲೆ ಇವರೆಲ್ಲಾ ಕಿತ್ತಾಡಿಕೊಂಡು ಭಾಗವಾದ್ರು ಅಂತ ಊರಿನಲ್ಲಿ ಜನ ಮಾತನಾಡಿಕೊಳ್ಳುವ ಹಾಗೆ ಆಗಬಾರದು. ಆಮೇಲೆ ಊರಿನ ಜನ ಅದ್ರಿಂದಲೇ ಅವರ ಮನೆ ಒಡೆದುಹೋಯ್ತಂತೆ ಅಂತ ಅದಕ್ಕೆ ರೆಕ್ಕೆ ಪುಕ್ಕ ಕಟ್ತಾರೆ. ಅದ್ರಿಂದ ಈ ವಿಷಯ ಯಾರಿಗೂ ಗೊತ್ತಾಗೋದು ಬ್ಯಾಡ. ನಾವು ನಾವೇ ಕೂತು ಈ ವಿಷಯವನ್ನು ಬಗೆಹರಿಸಿಕೊಳ್ಳುವ' ಎಂದು ಸಲಹೆ ಮಾಡಿದ.

ಚಂದ್ರಪ್ಪನ ಹೆಂಡತಿ ಗೌರಿಗೆ ಮದುವೆಯ ಸಂದರ್ಭದಲ್ಲಿ 'ತೆರದಣ' ಅಂತ ಕಟ್ಟಿಕೊಟ್ಟಿದ್ದ ಹಣಕ್ಕೆ ಚಂದ್ರಪ್ಪ ಒಂದು ಆಡನ್ನು ಕೊಂಡು ತಂದು ಸಾಕಿದ್ದ. ಆ ಆಡಿನಲ್ಲಿ ಹುಟ್ಟದ ಹೋತವನ್ನು ಅವರ ಮನೆಯವರೆಲ್ಲಾ ಸಾಕಿದ್ದರು. ಅದು ದೊಡ್ಡದಾಗಿದ್ದರಿಂದ ಅದನ್ನು ಸಿದ್ದೇಗೌಡರ ತಿಂಗಳ ತಿಥಿ ದಿನ ಕುಯ್ದುಕೊಳ್ಳಲಾಗಿತ್ತು. ಆಗ ಚಂದ್ರಪ್ಪ ತಮ್ಮ ಮನೆಯವರು ಹಾಗೇ ಅದನ್ನು ಉಚಿತವಾಗಿ ಕುಯ್ದುಕೊಳ್ಳಲು ವಿರೋಧಿಸಿದ್ದ. ಅದಕ್ಕೆ ಆತ 'ಅದು ನನ್ನ ಹೆಂಡ್ತಿಗೆ ಸೇರಿದ್ದು. ಹಾಗಾಗಿ ಅದಕ್ಕೆ ತನ್ನ ತಮ್ಮಂದಿರಾದ ಸಿದ್ದಯ್ಯ ಮತ್ತು ರಾಜಣ್ಣ ಎರಡು ಪಾಲು ಹಣ ಕೊಡಲಿ. ಅದರಲ್ಲಿ ನನ್ನದು ಒಂದು ಪಾಲು ಹಣ ಇರಲಿ' ಎಂದು ಹಟ ಹಿಡಿದಿದ್ದ. ಆಗ ಅವನ ಚಿಕ್ಕಪ್ಪಂದಿರೂ ಅದಕ್ಕೆ ಅವರಿಬ್ಬರಿಗೂ